# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 55
ಸದಸ್ಯರ ಹೆಸರು : ಶ್ರೀ ಎಂ.ಕೆ. ಪ್ರಾಣೇಶ್
ಉತ್ತರಿಸುವ ಸಚಿವರು : ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 09-07-2018

| | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರಸ್ತುತ ವರ್ಷದಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡುವಾಗ ಜಾತಿಯ ಮಾನದಂಡ ಅನುಸರಿಸುತ್ತಿರುವುದು ನಿಜವೇ; | ರಾಜ್ಯದಲ್ಲಿ ಸಾಮಾಜಿಕ ಹೊಣೆಗಾರಿಕೆಯಡಿಯಲ್ಲಿ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ರಿಯಾಯಿತಿ ಬಸ್‌ಪಾಸ್ ಒದಗಿಸಲಾಗುತ್ತಿದೆ. ಈ ವೆಚ್ಚದ ಶೇ. 50 ರಷ್ಟನ್ನು ಸರ್ಕಾರದಿಂದ, ಶೇ. 25 ರಷ್ಟನ್ನು ನಿಗಮಗಳಿಂದ ಮತ್ತು ಉಳಿದ ಶೇ. 25 ರಷ್ಟನ್ನು ವಿದ್ಯಾರ್ಥಿಗಳಿಂದ ಭರಿಸಲಾಗುತ್ತಿದೆ.<br><br>ಇದರೊಂದಿಗೆ ಹಿಂದಿನಿಂದಲೂ ಎಲ್ಲಾ ಸಮುದಾಯದ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ (1 ರಿಂದ 7ನೇ ತರಗತಿವರೆಗೆ) ಉಚಿತ ಬಸ್ ಪಾಸ್ ವಿತರಣೆ ಮಾಡಲಾಗುತ್ತಿದೆ.<br><br>2017-18ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಭರಿಸಬೇಕಾದ ಶೇ.25 ರಷ್ಟು ವೆಚ್ಚವನ್ನು ಎಸ್‌ಸಿಎಸ್‌ಪಿ/ಟಿಎಸ್‌ಪಿ ಅನುದಾನದಡಿಯಲ್ಲಿ ಭರಿಸಿದ್ದರಿಂದ, ಆ ವರ್ಗದ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್ ವಿತರಣೆ ಮಾಡಲಾಗುತ್ತಿದೆ.<br><br>ಪ್ರಸಕ್ತ ಸಾಲಿನಲ್ಲಿ ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್ ನೀಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |
| ಆ) | ಎಲ್ಲಾ ವಿದ್ಯಾರ್ಥಿಗಳಿಗೂ ಏಕನೀತಿಯ ಪಾಸುಗಳನ್ನು ವಿತರಿಸಲಾಗುವುದೆಂದು ಸರ್ಕಾರ ಕೊಟ್ಟ ಭರವಸೆಯನ್ನು ಯಾವ ದಿನಾಂಕದಿಂದ ವಾಪಸ್ ಪಡೆಯಲಾಗಿದೆ; | |
| ಇ) | ಪ್ರಸ್ತುತ ವರ್ಷ ಬಸ್ ಪಾಸ್ ವಿತರಣೆಯ ತಾರತಮ್ಯ ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | |

ಸಾರಿಇ 74 ಸಾಸಂಪ್ರ 2018

(ಡಿ.ಸಿ. ತಮ್ಮಣ್ಣ)
ಸಾರಿಗೆ ಸಚಿವರು